ಶ್ರೀ ಆರ್. ವೆಂಕಟರಾವಮಯ್ಯ.— ಕೆ.ಇ.ಬಿ.ಯಲ್ಲಿ ಹಂಗಾವಿಯಾಗಿ ಕೆಲಸ ಮಾಡುತ್ತಿರುವಂಥ ನೌಕರರನ್ನು ಖಾಯಂ ಪಿತಕ್ಕೆ ಮಾಡಬಾರದು?

ಶ್ರೀ ಲಕ್ಷ್ಮೀನರಸಿಂಹಯ್ಯ.— ನಮ್ಮಲ್ಲಿ ಹಂಗಾವಿ ನೌಕರರು ಯಾರೂ ಇಲ್ಲ.

ಬೇಡ್ತಿ ಮಂತ್ತು ಅಘನಾಶಿನಿ ಜಲವಿದ್ಯುತ್ ಯೋಜನೆಗಳ ಬಗ್ಗೆ.

೧೭೬೩. **ಶ್ರೀ ಆರ್.ಎನ್ ನಾಯಕ್ (ಭಟ್ಕಳ) —ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?**

ಅ) ಬೇಡ್ತಿ ಮತ್ತು ಅಘನಾಶಿನಿ ಜಲವಿದ್ಯುತ್ ಯೋಜನೆಗಳನ್ನು ಅನುಕ್ರಮವಾಗಿ ಎಂದಿನಿಂದ ಪ್ರಾರಂಭಿಸಲಾಯಿತು ?

ಆ) ಈ ಯೋಜನೆಗಳಿಗೆ ನಿಗದಿ ಪಡಿಸಿರುವ ಅಂದಾಜು ವೆಚ್ಚವೆಷ್ಟು ?

ಇ) ಬೇಡ್ತಿ ಯೋಜನೆಯ ಅಡಿಯಲ್ಲಿ ಈಗ ಕೆಲಸ ಮಾಡುತ್ತಿರುವವರ ಸಂಖ್ಯೆ ಎಷ್ಟು? ಮತ್ತು ಇದುವರೆಗೂ ಎಷ್ಟು ಹಣ ವಿನಿಯೋಗಿಸಲಾಗಿದೆ?

ಈ) ಆ ಯೋಜನೆಯ ಅಡಿಯಲ್ಲಿ ಮುಳುಗಡೆ ಆಗುವ ಸಾಗುವಳಿ ಭೂಮಿ ಹಾಗೂ ಅರಣ್ಯ ಭೂಮಿಯ ವಿಸ್ತೀರ್ಣವೆಷ್ಟು?

ಉ) ಬೇಡ್ತಿ ಯೋಜನೆಯ ಅನುಷ್ಠಾನದ ಬಗ್ಗೆ ವರದಿ ನೀಡಲು ಪರಿಶೀಲನಾ ಸಮಿತಿಯನ್ನು ಎಂದು ನಿಯೋಜಿಸಲಾಯಿತು ? ಮತ್ತು ಈ ಸಮಿತಿಯಲ್ಲಿರುವ ಸದಸ್ಯರಾರು ? ಸಮಿತಿಯು ತನ್ನ ವರದಿಯನ್ನು ಒಪ್ಪಿಸಿದೆಯೇ ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮತ್ತು ತೋಟಗಾರಿಕೆ ರಾಜ್ಯ ಮಂತ್ರಿಗಳು).—

ಅ) ಬೇಡ್ತಿ ಯೋಜನೆ ಕೆಲಸವನ್ನು ೧೯೭೯ರ ಆಕ್ಟೋಬರ್ ತಿಂಗಳಲ್ಲಿ ಪ್ರಾರಂಭಿಸಿ ಅದೇ ವರ್ಷದ ಡಿಸೆಂಬರ್ ತಿಂಗಳಿಂದ ಸ್ಥಗಿತಗೊಳಿಸಿದೆ.

ಅಘನಾಶಿನಿ ಯೋಜನೆಯು ಕೆಲಸ ಪ್ರಾರಂಭಿಸಿಲ್ಲ.

ಆ) ೧೯೭೯ರ ಅಂದಾಜಿನಂತೆ ಬೇಡ್ತಿ ಯೋಜನೆಯ ಅಂದಾಜು ವೆಚ್ಚ ೧೫೬.೭೯ ಕೋಟಿ ರೂ. ಗಳು ಅಘನಾಶಿನಿ ಯೋಜನೆಯು ಇನ್ನೂ ಪರಿಶೀಲನೆಯಲ್ಲಿದೆ.

ಇ) ಬೇಡ್ತಿ ಯೋಜನೆಯು ಸ್ಥಗಿತಗೊಂಡಿರುವುದರಿಂದ ಅಲ್ಲಿ ಕೆಲಸಗಾರರಿಲ್ಲ. ಕೇವಲ ಉಸ್ತುವಾರಿ ಕೆಲಸವನ್ನು ನೋಡಿಕೊಳ್ಳಲು ಕನಿಷ್ಠ ಸಿಬ್ಬಂದಿಯನ್ನು ಇಟ್ಟಿದೆ. ೩೧-೩-೮೬ರವರೆಗೆ ೯,೦೫ ಕೋಟಿ ರೂ. ವೆಚ್ಚವಾಗಿದೆ.

ಈ) ಬೇಡ್ತಿ ಯೋಜನೆಯಲ್ಲಿ ೬೨೧ ಎಕರೆ ಸಾಗುವಳಿ ಜಮೀನು ೬೮೦೦ ಎಕರೆ ಅರಣ್ಯ ಜಮೀನು ಮುಳುಗಡೆಯಾಗುತ್ತದೆ.

ಉ) ದಿನಾಂಕ ೧೩-೧೦-೧೯೮೧ರಲ್ಲಿ ಪರಿಶೀಲನಾ ಸಮಿತಿಯನ್ನು ರಚಿಸಲಾಯಿತು, ಸಮಿತಿಯ ಸದಸ್ಯರು.

ಶ್ರೀಯುತರು

೧)	ಪೆಚ್ ವಿ. ನಾರಾಯಣರಾವ್	... ಅಧ್ಯಕ್ಷ
೨)	ಜಿ.ಆರ್. ವಾಮನ ಕುರ್ಮೆ	... ಸದಸ್ಯ
೩)	ಬಿ.ಸಿ. ಅಂಗಡಿ	... ಸದಸ್ಯ
೪)	ಎಂ ವಿ. ಪಾರ್ಥಸಾರಥಿ	... ಸದಸ್ಯ
೫)	ಕೆ.ಸಿ. ರೆಡ್ಡಿ	... ಸದಸ್ಯ
೬)	ಸಿಸಿಲ್ ಸಾಲ್ಡಾನ	... ಸದಸ್ಯ
೭)	ಎ. ಪೂ ಹನದಾಸ್ ಮೋಸಸ್	... ಸದಸ್ಯ ಕಾರ್ಯದರ್ಶಿ,

ಸಮಿತಿಯು ಸರ್ಕಾರಕ್ಕೆ ದಿನಾಂಕ ೩೦-೪-೧೯೮೨ರಂದು ವರದಿ ಸಲ್ಲಿಸಿದೆ.

೪-೦೦ ಪಿ.ಎಂ.

ಶ್ರೀ ಆರ್.ಎನ್. ನಾಯಕ್.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೊಟ್ಟ ಅಂಕ ಅಂಶದ ಪ್ರಕಾರ ಒಟ್ಟು ೬೨೧ ಎಕರೆಗಳು ಮಾತ್ರ ಮುಳುಗಡೆಯಾಗಂತ್ತದೆ ಎಂದು ಅರ್ಥವಾಗುತ್ತದೆ. ಅಂದರೆ ಅಡಿಕೆ ತೋಟಗಳು ಮಾತ್ರವಲ್ಲ ಎಲ್ಲ ಜಮೀನುಗಳು ಮುಳುಗಡೆಯಾಗುತ್ತದೆ ಆದುದರಿಂದ ಇಷ್ಟು ಜಮೀನು ಮುಳುಗಡೆಯಾಗುತ್ತಿರುವುದರಿಂದ ಅಲ್ಲಿಯ ಜನರು ಮಾನ್ಯ ಮುಖ್ಯ ಮಂತ್ರಿಗಳ ಮುಖಂಡತ್ವದಲ್ಲಿ ಗಲಾಟೆ ಎಬ್ಬಿಸಿ ೧೯೬೯ರಲ್ಲಿ ಕೆಲಸವನ್ನು ಸ್ಥಗಿತಗೊಳಿಸಿದರು. ಆದಕ್ಕಾಗಿ ಒಂದು ಸಮಿತಿಯನ್ನು ನೇಮಿಸಿ, ಆ ಸಮಿತಿಯು ೧೯೭೬ರಲ್ಲಿ ತನ್ನ ವರದಿಯನ್ನು ನೀಡಿದೆ. ಆ ಸಮಿತಿಯು ೧೯೭೬ರಲ್ಲಿ ಕೊಟ್ಟ ವರದಿಯನ್ನು ಅನುಷ್ಠಾನ ಮಾಡಬೇಕೇ ಬೇಡವೇ ? ಹಾಗೆ ಅನುಷ್ಠಾನ ಮಾಡದಿದ್ದರೆ ನಿಮಗೆ ಆಗುವ ತೊಂದರೆ ಏನು ? ಅದಕ್ಕೆ ಕಾರಣಗಳೇನು ? ಇದರ ಬಗ್ಗೆ ಜನಸಾಮಾನ್ಯರಿಗೆ ಏನು ತಿಳಿಸಬೇಕಾಗುತ್ತದೆ ? ಈ ಸರ್ಕಾರ ಶಿಫಾರಸ್ಸುಗಳನ್ನು ಕಾರ್ಯಾಚರಣೆಗೆ ತರದೆ ಇರಲು ಕಾರಣವೇನೆಂದರೆ. ಕೇವಲ ತಮ್ಮ ಸ್ವಂತ ಬಳಗದವರಿಗೆ ಹಾಗೂ ಸಂಬಂಧಿಕರಿಗೆ, ತೊಂದರೆಯಾಗುತ್ತದೆ ಯೆಂದು, ದೇಶದಲ್ಲಿ ಉತ್ತಮವಾದಂತ ಯೋಜನೆಯನ್ನು ಕಾರ್ಯಾಚರಣೆಗೆ ತರದೆ ಸ್ಥಗಿತಗೊಳಿಸಿದ್ದಾರೆಂದು ನನ್ನ ಆಪಾದನೆ ಇದೆ. ಅದಕ್ಕೆ ಉತ್ತರ ತಾವು ಕೊಡಬೇಕು.

ಶ್ರೀ ಲಕ್ಷ್ಮೀನರಸಿಂಹಯ್ಯ.—೧೯೮೧ರಲ್ಲಿ ಈ ಸಮಿತಿಯನ್ನು ರಚನೆ ಮಾಡಲಾಗಿದ್ದು, ಈ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ೧೯೮೧ರಿಂದ ೧೯೮೬ರವರೆಗೆ ೫ ವರ್ಷಗಳ ಕಾಲಾವಕಾಶವನ್ನು ತೆಗೆದುಕೊಂಡಿದೆ ಜೊತೆಗೆ ೧೯೮೯ರಲ್ಲಿ ಈ ಯೋಜನೆಗೆ ಮಂಜೂರಾತಿ ಸಿಕ್ಕಿ, ಕೆಲಸ ಪ್ರಾರಂಭವಾಯಿತು ಅಲ್ಲಿ ಸ್ಥಳೀಯವಾಗಿ ವಿರೋಧ ಬಂದಿದ್ದರಿಂದ ಆಗಿನ ಸರ್ಕಾರ ಈ ಕೆಲಸವನ್ನು ನಿಲ್ಲಿಸಿತು. ಅದಕ್ಕೆ ವಿಶೇಷವಾದ ಬೇರೆ ಯಾವ ಕಾರಣವೂ ಇಲ್ಲ. ಮಾನ್ಯ ಸದಸ್ಯರು ಕೇವಲ ೬೨೧ ಎಕರೆ ಜಮೀನು ಮಾತ್ರ ಮುಳುಗಡೆಯಾಗುತ್ತದೆ ಎಂದು ಹೇಳಿದ್ದೇವೆಂದು ತಿಳಿಸಿದ್ದಾರೆ. ಅದು ಸರಿಯಲ್ಲ, ಸುಮಾರು ಹೆಚ್ಚು ಕಡಿಮೆ ೬೯೦೦ ಎಕರೆಗಳು ಅರಣ್ಯ ಜಮೀನು ಮುಳುಗಡೆಯಾಗುತ್ತದೆ ಎಂಬ ವರದಿ ನನ್ನ ಬಳಿಇದೆ. ೬೯೦೦ ಎಕರೆಗಳಿಗಿಂತ ಹೆಚ್ಚಾಗಿ ಅರಣ್ಯ ಜಮೀನು ಮುಳುಗಡೆಯಾಗುತ್ತದೆ ಏನು ಪ ಸಂದರ್ಭದಲ್ಲಿ ಇವತ್ತಿನ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರ ಇದಕ್ಕೆ ಅನುಮತಿ ನೀಡುತ್ತದೆ ಎಂದು ನಾವು ನಿರೀಕ್ಷೆ ಮಾಡಲು ಆಗುವುದಿಲ್ಲ. ಕೇವಲ ೬೨೧ ಎಕರೆಗಳು ಜಮೀನು ಮುಳುಗಡೆಯಾಗುತ್ತಿರುವುದರಿಂದ ಬೇಡತಿ ಯೋಜನೆಯನ್ನು ನಿಲ್ಲಿಸಲಾಗಿದೆ ಎಂಬ ಭಾವನೆ ಸರಿಯಲ್ಲ. ಸಮಿತಿಯು ವರದಿಯನ್ನು ಸಲ್ಲಿಸಿ ಎರಡು ವರ್ಷಗಳಾಗಿವೆ. ಸರ್ಕಾರ ವರದಿಯನ್ನು ತೀವ್ರವಾಗಿ ಪರಿಶೀಲನೆ ಮಾಡಿ, ಒಪ್ಪಿಗೆಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದರೂ ಕೂಡ, ಇದಕ್ಕೆ ಕೇಂದ್ರ ಸರ್ಕಾರ, ಒಪ್ಪಿಗೆ ನೀಡುವುದು ಕಷ್ಟವೆಂದು ನನ್ನ ಭಾವನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೊದಲು ಅವರು ಕೇಳಿದ್ದು ಏನೆಂದರೆ, ಈ ಬಗ್ಗೆ ಕೊಟ್ಟಿರುವಂಥ ರಿಪೋರ್ಟ್‌ನಲ್ಲಿ ಏನು ಹೇಳಲಾಗಿದೆ ? What are the recommendations of the Committee ? ಆ ರಿಪೋರ್ಟ್‌ನಲ್ಲಿ ವಿಶಾದರು ಹೇಳಿರಲೇ ಬೇಕಲ್ಲಾ ? ನಮಗೆ ಅದರಲ್ಲಿ ಯಾವ ರೆಕಮೆಂಡೇಷನ್‌ಗಳು ಇವೆಯೆಂದು ಹೇಳಿಬಿಡಿ. ಬೇಡ್ತಿ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಿ. ಅವರು ರಿಜೆಕ್ಟ್ ಮಾಡಿದರೆ. ಕೇಂದ್ರ ಸರ್ಕಾರದವರು ರಿಜೆಕ್ಟ್ ಮಾಡಿದ್ದಾರೆಂದು ಹೇಳಿ. ಕೇಂದ್ರ ಸರ್ಕಾರ ಈ ಯೋಜನೆಗೆ ಒಪ್ಪಿಗೆ ಕೊಡುವುದಿಲ್ಲವೆಂದು ನೀವೇ ಊಹಾಪೋಹ ಮಾಡಿಕೊಂಡು ಸುಮ್ಮನೆ ಆದರೆ ಹೇಗೆ ? That means you have determined not to execute the Project. ಆದ್ದರಿಂದ ದಯವಿಟ್ಟು ಇದರ ಬಗ್ಗೆ ಎಕ್ಸಪ್ಲನೇಷನ್ ಕೊಡಿ. What are the recommendations of the Committee ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಸಮಿತಿಯು ನೀಡಿದ ವರದಿಯನ್ನು ಸರ್ಕಾರ ಇನ್ನೂ ಪರಿಶೀಲಿಸುತ್ತಿರುವುದರಿಂದ ಅದರ ವಿವರಗಳ ಬಗ್ಗೆ ಈಗ ಹೇಳತಕ್ಕಂತಾದ್ದು ಸರಿಯಲ್ಲವೆಂದು ನನಗನಿಸುತ್ತದೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಸಮಿತಿಯವರು ಮಾಡಿರುವ ರೆಕಮೆಂಡೇಷನ್ಸ್‌ಗಳು ಏನು ಎಂಬುದನ್ನು ನಮಗೆ ಹೇಳಿ ನೀವು ಬೇಕಾದರೆ ಅದರ ಬಗ್ಗೆ ಪರಿಶೀಲಿಸಿಕೊಳ್ಳಿ.. ಈ ಯೋಜನೆಯನ್ನು ಇಂಪ್ಲಿಮೆಂಟ್ ಮಾಡುತ್ತೀರೋ ಇಲ್ಲವೋ ಅದು ನಿಮಗೆ ಬಿಟ್ಟಿದ್ದು.

ಉಪಾಧ್ಯಕ್ಷರು.—ವರದಿ ಇನ್ನೂ ಪರಿಶೀಲನೆಯಲ್ಲಿ ಇದೆಯೆಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಉಪಾಧ್ಯಕ್ಷರೇ, ತಪ್ಪಾಗೆ ಗೊತ್ತಿದ್ದ ಹಾಗೆ ಡಿಸ್ಟ್ರಿಕ್ಟ್ಸ್ ರೀ-ಆರ್ಗನೈಸೇಷನ್ ರಿಪೋರ್ಟ್ ಇದೆ, ಆ ರಿಪೋರ್ಟ್‌ನಲ್ಲಿ ಯಾವ ಯಾವ ಸ್ಥಳಗಳನ್ನು ಜಿಲ್ಲೆಗಳಾಗಿ ಮತ್ತು ತಾಲ್ಲೂಕುಗಳನ್ನಾಗಿ ಮಾಡಬೇಕೆಂಬ ಬಗ್ಗೆ ವರದಿ ಕೊಟ್ಟಿದ್ದಾರೆ. ಆ ವರದಿಯನ್ನು ಜಾರಿ ಮಾಡುವ ಮೊದಲೇ ಅದರ ಬಗ್ಗೆ ಸರ್ಕಾರವು ನಮಗೆ ತಿಳಿಸಿದೆ. ಅದೇ ರೀತಿ ಈ ರಿಪೋರ್ಟ್‌ನಲ್ಲಿ ಏನು ರೆಕಮಂಡೇಷನ್‌ಗಳು ಇವೆಯೆಂದು ಹೇಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ವರದಿ ಬಂದಿದೆಯೆಂದು ಹೇಳಲಾಗಿದೆ. ಆ ವರದಿ ಸಚಿವ ಸಂಪುಟದ ಮುಂದೆ ಬರುವುದಕ್ಕಿಂತ ಮುಂಚೆ ಸಂಬಂಧಪಟ್ಟ ಕಾರ್ಯದರ್ಶಿಗಳು ಪರಿಶೀಲಿಸಬೇಕು. ಕಾರ್ಯದರ್ಶಿಗಳು ಪರಿಶೀಲಿಸಿದ ನಂತರ ಸಚಿವ ಸಂಪುಟದ ಮುಂದೆ ಅನು ಬರಬೇಕು. ಆ ಮೇಲೆ ಮಾನ್ಯ ಸದಸ್ಯರುಗಳಿಗೆ ಹಾಗು ಸಾರ್ವಜನಿಕರಿಗೆ ತಿಳಿಸತಕ್ಕಂಥ ಕ್ರಮ ಇದೆ. ಇದು ಸನ್ಮಾನ್ಯ ಖರ್ಗೆಯವರಿಗೂ ಗೊತ್ತಿದೆ. ಆದರೂ ಅವರು ಈ ರೀತಿ ಕೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ರಿಪೋರ್ಟ್ ಬಂದು ಆಗಲೇ ಎರಡು ವರ್ಷಗಳಾಗಿವೆಯಲ್ಲವೆ? ಡಿಲೇ ಏಕೆ ಮಾಡುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ನಿಧಾನ ಏಕೆ ಆಯಿತೆಂದು ಬೇಕಾದರೆ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಉದ್ದೇಶಪೂರ್ವಕವಾಗಿ ನೀವು ನಿಧಾನ ಮಾಡುತ್ತಿದ್ದೀರಿ. ಎರಡು ವರ್ಷ ಏಕೆ ಬೇಕು ?

ಶ್ರೀ ಎ. ಲಕ್ಷ್ಮೀಸಾಗರ್.—ವಿಜಯನಗರದ ಉಕ್ಕು ಕಾರ್ಖಾನೆ ಪ್ರಾರಂಭ ಮಾಡಬೇಕೆಂದು ಶಂಕುಸ್ಥಾಪನೆ ಮಾಡಿ ೧೨ ವರ್ಷಗಳಾಯಿತು. ಕೇಂದ್ರಸರ್ಕಾರದವರಂ ಆದರ ಕಡೆ ಗಮನವನ್ನೇ ಹರಿಸುತ್ತಿಲ್ಲ. ಇದರ ಬಗ್ಗೆ ನಾವು ಮಾತನಾಡುವುದಿಲ್ಲ. ಆದರೆ ರಿಪೋರ್ಟ್ ಪರಿಶೀಲಿಸುವುದಕ್ಕೆ ಎರಡು ವರ್ಷ ಏಕೆ ತಡ ಆಯಿತು ಎಂದು ಕೇಳುತ್ತಿದ್ದಾರೆ ?

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟಿರುವಂಥ ಉತ್ತರದಲ್ಲಿ ೧೯೭೯ನೇ ಇಸವಿಯಲ್ಲಿ ಈ ಯೋಜನೆ ಪ್ರಾರಂಭವಾಗಬೇಕಾಗಿತ್ತು ಎಂದು ಹೇಳಿದ್ದಾರೆ. ೧೯೭೯ನೇ ಇಸವಿಯಲ್ಲಿ ಈ ಯೋಜನೆಯನ್ನು ಪ್ರಾರಂಭ ಮಾಡುವುದಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ಕೊಟ್ಟಿತ್ತೇ ? ಕೇಂದ್ರ ಸರ್ಕಾರದ ಒಪ್ಪಿಗೆ ಪಡೆಯದೆ ಈ ಯೋಜನೆಯನ್ನು ತಮ್ಮಾರು ಮಾಡಲಾಗಿತ್ತೇ? ಇದರ ಅರ್ಥ ಏನು ? ಈಗ ಇವರು ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವುದಕ್ಕೆ ಹೊರಟಿದ್ದಾರೆ. ಇನ್ನೂ ಒಂದು ಅಧ್ಯಕ್ಷರೇ, ಒಂದು ರಿಪೋರ್ಟ್‌ನ್ನು ಪರಿಶೀಲಿಸುವುದಕ್ಕೆ ಎರಡು ವರ್ಷಗಳು ಏಕೆ ಬೇಕು ? ಈ ರಿಪೋರ್ಟ್‌ನಲ್ಲಿ ಏನೇನು ರೆಕಮೆಂಡೇಷನ್‌ಗಳು ಇವೆ ? ಮಾನ್ಯ ಮುಖ್ಯಮಂತ್ರಿಯವರಿಗೆ ಈ ಯೋಜನೆಯನ್ನು ಈ ರಾಜ್ಯದಲ್ಲಿ ಅನುಷ್ಠಾನ ಮಾಡುವುದಕ್ಕೆ ಮನಸ್ಸು ಇಲ್ಲದೇ ಇರುವುದರಿಂದ ಮತ್ತು ಈ ಯೋಜನೆ ಮಾಡಿದರೆ ಇವರ ಸ್ವಂತ ಜನರ ತೋಟದ ಜಮೀನು ಮುಳುಗಡೆಯಾಗುತ್ತದೆ ಎನ್ನುವ ಉದ್ದೇಶದಿಂದ ಅದನ್ನು ಮುಚ್ಚಿ ಹಾಕುತ್ತಿದ್ದಾರೆ ಎಂದು ಹೇಳುತ್ತೇನೆ. ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಲಕ್ಷ್ಮೀನರಸಿಂಹಯ್ಯ.—ಈ ಯೋಜನೆಯ ಕಾರ್ಯಗಳು ಅವರ ಪಕ್ಷದ ಸರ್ಕಾರ ಇದ್ದಾಗಲೇ ನಿಂತುಹೋಗಿತ್ತು. ಅವರು ನಿಲ್ಲಿಸದೇ ಮುಂದುವರಿಸಿದ್ದಿದ್ದರೆ ಈಗ ಈ ಪ್ರಶ್ನೆ ಬರುತ್ತಿರಲಿಲ್ಲ. ಆಮೇಲೆ ಎರಡು ವರ್ಷಗಳು ಏಕೆ ಬೇಕು ಎಂದು ಕೇಳಿದ್ದಾರೆ. ಮಿತಿಯವರು ವರದಿಯನ್ನು ಕೊಡುವುದಕ್ಕೇ ೫ ವರ್ಷಗಳನ್ನು ತೆಗೆದುಕೊಂಡಿದ್ದಾರೆ, ಸರ್ಕಾರ ಈ ವರದಿಯನ್ನು ತೀವ್ರವಾಗಿ ಪರಿಶೀಲನೆ ಮಾಡುತ್ತಿದೆ, ಪರಿಶೀಲಿಸಿದ ಮೇಲೆ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ. ಸರ್ಕಾರ ತೆಗೆದುಕೊಂಡ ತೀರ್ಮಾನವನ್ನು ಈ ಸಭೆಯ ಮುಂದೆ ಇಡುತ್ತೇವೆ. ವರದಿಯನ್ನು ಪರಿಶೀಲನೆ ಮಾಡುವುದಕ್ಕೆ ಎರಡು ವರ್ಷಗಳು ಬೇಕಾಗುತ್ತದೆಂದೂ ನನ್ನ ಭಾವನೆ.

ಶ್ರೀ ಆರ್. ಎನ್. ನಾಯಕ್.—ಈ ಯೋಜನೆಯಲ್ಲಿ ಎಷ್ಟು ಜಮೀನು ಮುಳುಗಡೆಯಾಗುತ್ತದೋ ಅದಕ್ಕಿಂತ ಹೆಚ್ಚು ಜಮೀನು ಮುಳುಗಡೆ ಆದ ಕಡೆ ಇಂತಹ ಯೋಜನೆಗಳನ್ನು ಸರ್ಕಾರ ತೆಗೆದುಕೊಂಡಿಲ್ಲವೆ ?

ಉಪಾಧ್ಯಕ್ಷರು.—ತಮಗೆ ಬೇಕಾದಷ್ಟು ಕಾಲಾವಕಾಶವನ್ನು ಮಾಡಿಕೊಟ್ಟಿರುತ್ತೇನೆ.....

ಶ್ರೀ ಆರ್. ಎಸ್. ನಾಯಕ್.—ಉದ್ದೇಶಪೂರ್ವಕವಾಗಿ ಸರ್ಕಾರದವರು ಇದನ್ನು ತಡ ಮಾಡುತ್ತಾ ಇದ್ದಾರೆ ಎಂದು ಹೇಳಬೇಕಾಗುತ್ತದೆ.....

ಉಪಾಧ್ಯಕ್ಷರು.—ತಮಗೆ ಸಾಕಷ್ಟು ಅವಕಾಶವನ್ನು ಮಾಡಿಕೊಟ್ಟಿದ್ದೇನೆ. ಇನ್ನು ತಾವು ಮುಂದುವರಿದು ಮಾತನಾಡುವುದಕ್ಕಾಗುವುದಿಲ್ಲ, ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಆರ್. ಎನ್. ನಾಯಕ್.—ಶರಾವತಿಯನ್ನು ತಾವು ಕಾರ್ಯಗತ ಮಾಡಿದ್ದೀರಿ... ಆದರೆ ಬೇಡ್ತಿ ಬೇಡ...ನಿಮ್ಮ ಜಮೀನು ಇದ್ದರೆ ನಿಮಗೆ ಮನಸ್ಸು ಬಂದಂತೆ ಮಾಡುತ್ತೀರಾ?.....ನಿಮ್ಮವರ ಜಮೀನು ಮುಳುಗಡೆಯಾಗುತ್ತದೆ ಎಂದು ಹೀಗೆ ಮಾಡುತ್ತೀರಾ ?...

ಉಪಾಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಬೇಕು ಹೀಗೆ..ತಾವು ಮಾತನಾಡುವುದಕ್ಕೆ ಆಗುವುದಿಲ್ಲ.

ಶ್ರೀ ಆರ್.ಎನ್. ನಾಯಕ್.—ಇಲ್ಲ ಅಧ್ಯಕ್ಷರೆ, ನಾನು ಕುಳಿತುಕೊಳ್ಳುವುದಿಲ್ಲ. ನನಗೆ ಅವರಿಂದ ಸೂಕ್ತವಾದ ಉತ್ತರ ಬೇಕು. ಆ ಕಡೆ ನೀವು ಶರಾವತಿ ಟೇಲ್‌ರೈಸ್ ಯೋಜನೆ ಮಾಡುತ್ತಾ ಇದ್ದೀರಲ್ಲ? ಅದರಲ್ಲಿ ಎಷ್ಟು ಜನರ ಜಮೀನು ಮುಳುಗಿ ಹೋಗುತ್ತದೆ ಎಂದು ವಿಚಾರ ಮಾಡಿದ್ದೀರಾ ? ನಿಮ್ಮವರ ಸಮೀನು ಹೋದರೆ ಮಾತ್ರ ನಿಮಗೆ.....

ಉಪಾಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಬೇಕು.....

ಶ್ರೀ ಎಂ. ಪಂಲ್ಲಿಕಾರ್ಜುನ ಖರ್ಗೆ.—ಅವರು ಹೇಳುತ್ತಿರುವುದು ಈ ರೀತಿಯಲ್ಲಿ ತಾರತಮ್ಯ ಏಕೆ ಮಾಡುತ್ತೀರಿ ಎಂದು ? ಸಮಾರು ೬೦ ಎಕರೆ ಜಮೀನು ಮುಖ್ಯಮಂತ್ರಿಯವರಿಗೆ ಸಂಬಂಧಪಟ್ಟ ವರದ್ದು ಮುಳುಗಡೆಯಾಗುತ್ತದೆ, ಅದಕ್ಕಾಗಿ.....

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಖರ್ಗೆಯವರು ಇತ್ತಕಡೆಗೆ ಸ್ವಲ್ಪ ಗಮನ ಕೊಡಬೇಕು. ಈ ಹಾಗಲೇ ಅವರಿಗೆ ಮೂರು ಸಪ್ಲಿಮೆಂಟರಿ ಪ್ರಶ್ನೆಗಳಿಗೆ ಅವಕಾಶವನ್ನು ಕೊಟ್ಟಿದ್ದಾರೆ. ಒಂದೊಂದು ಸಪ್ಲಿಮೆಂಟರಿಯಲ್ಲಿಯೂ ಕೂಡ ೩-೪ ಮತ್ತೆ ಉಪಪ್ರಶ್ನೆಗಳನ್ನು ಕೇಳಿದ್ದಾರೆ ಮತ್ತೂ ಹೀಗೆ ವಾಕರಿಸಾಡಿದರೆ.....

ಶ್ರೀ ಆರ್. ಎನ್. ನಾಯಕ್.—ನಿಮ್ಮ ಈ ದ್ವಿಮುಖ ನೀತಿಯಿಂದ ಏನು ಮಾಡುತ್ತೀರಿ ಅಂದರೆ ಈ ರಾಜ್ಯದ ಜನತೆಯನ್ನು ಕತ್ತಲಲ್ಲಿ ಮುಳುಗಿಸಿ ಬಿಡುತ್ತೀರಿ...ನೀವು ಬೇಡ್ತಿಯನ್ನು ಕಾರ್ಯಗತ ಮಾಡದೇ ಇರುವುದರಿಂದ ನನಗೆ ಏನೂ ಆಗಬೇಕಾಗಿಲ್ಲ ನವಗೆ ವಿದ್ಯುಚ್ಛಕ್ತಿಯನ್ನು ಬೇಕಾದಷ್ಟು ಕೊಡಿ. ಆ ಒಂದು ಶಕ್ತಿ ನಿಮ್ಮಲ್ಲಿ ಇದೆಯೇ ?

ಉಪಾಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೆ, ನನಗೆ ಸರಿಯಾದ ಉತ್ತರವನ್ನು ಅವರು ಕೊಟ್ಟಿಲ್ಲ.

(ಗೊಂದಲ)

ಶ್ರೀ ಲಕ್ಷ್ಮೀನರಸಿಂಹಯ್ಯ.—ಈ ವಿಚಾರ ಎಷ್ಟೋ ಸಾರಿ ಈ ಸದನದಲ್ಲಿ ಪ್ರಸ್ತಾಪ ಆಗಿದೆ. ಅದಕ್ಕೆ ಎಷ್ಟೋ ಸಾರಿ ಉತ್ತರವನ್ನು ಕೊಟ್ಟಿದ್ದಾಗಿದೆ.

ಶ್ರೀ ಆರ್. ಎನ್. ನಾಯಕ್ —ರಾಜ್ಯದ ಒಳಿತಿಗೋಸ್ಕರವಾಗಿ ಇಂತಹ ಪ್ರಶ್ನೆಯನ್ನು ನಾನೂ ನೂರಾರು ಸಲ ಕೇಳಬೇಕಾಗಿ ಬರಬಹುದು. ನಿಮಗೆ ಅದಕ್ಕೆ ಉತ್ತರ ಕೊಡಲು ಸ್ಪಷ್ಟ ಇಲ್ಲ, ತಾಕತ್ತು ಇಲ್ಲ ಎಂದು ಹೇಳ ಬೇಕಾಗುತ್ತದೆ.....

(ಗೊಂದಲ)

ಉಪಾಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮುಂದಿನ ಪ್ರಶ್ನೆಯನ್ನು ಮಾನ್ಯ ನೇಸಾಯಿಯವರು ಕೇಳಬಹುದು.